ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇ.ವಿ.ಜಿ/ಕ.ಚೇ.ಉ.ಮೌ/2022-23

ದಿನಾಂಕ: 29.04.2022

## ಸುತ್ತೋಲೆ

ವಿಷಯ: 2022-23 ನೇ ಶೈಕ್ಷಣಿಕ ವರ್ಷದಲ್ಲಿ "ಕಲಿಕಾ ಚೇತರಿಕೆ ಉಪಕ್ರಮ"ವನ್ನು ಶಾಲೆಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ:1. ಎಡಿಎಂ.2(1):ಶೈ.ವ.ನಿ:02:2021-22 ದಿ. 15.02.22

2. ಈ ಕಛೇರಿ ಸು.ಸ.ಸಂ: DSERT/EVG/2022-23 ಅ.ಹಾ/32/2021-22 ದಿನಾಂಕ: 04.3.2022

********

2022-2023 ನೇ ಶೈಕ್ಷಣಿಕ ವರ್ಷವನ್ನು "ಕಲಿಕಾ ಚೇತರಿಕೆ ವರ್ಷ" ಎಂದು ಘೋಷಿಸಿದ್ದು, ಕಲಿಕಾ ಚೇತರಿಕೆ ಉಪಕ್ರಮವನ್ನು ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ 2022-2023 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಉಪಕ್ರಮದ ಕುರಿತು ಎಲ್ಲಾ ಶೈಕ್ಷಣಿಕ ಭಾಗೀದಾರರಿಗೆ ವಿವಿಧ ಕಾರ್ಯಕ್ರಮಗಳು ಹಾಗೂ ಸಭೆಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ಉಪಕ್ರಮದ ಯಶಸ್ವಿ ಅನುಷ್ಠಾನಕ್ಕೆ ಪೋಷಕರ ಹಾಗೂ ಶಾಲಾಭಿವೃದ್ಧಿ & ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು/ಸದಸ್ಯರಲ್ಲಿ ಜಾಗೃತಿ ಮೂಡಿಸಲು ಪತ್ರಗಳನ್ನು ಹಾಗೂ ಶಿಕ್ಷಕರ ಸಹಕಾರವನ್ನು ಕೋರುವ ಪತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಸದರಿ ಪತ್ರಗಳನ್ನು ಪೋಷಕರ ಸಭೆ ಹಾಗೂ ಶಾಲಾಭಿವೃದ್ಧಿ & ಮೇಲುಸ್ತುವಾರಿ ಸಮಿತಿಯ ಸಭೆಗಳಲ್ಲಿ ಒದಗಿಸುವ ಮೂಲಕ ಅವರಿಗೆ ಕಲಿಕಾ ಚೇತರಿಕೆ ಉಪಕ್ರಮದ ಕುರಿತು ಜಾಗೃತಿ ಮೂಡಿಸಲು ತಿಳಿಸಿದೆ.

(ಪಲ್ಲವಿ ಆಕುರಾತಿ)
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಗೆ,
1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:
1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಅಪರ ಆಯುಕ್ತರು, ಸಾ.ಶಿ.ಇ ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಸಾ.ಶಿ.ಇ ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
6. ಕಛೇರಿ ಪ್ರತಿ.

ನಿ88ನಿದೆ,
DSERT

ಆತ್ಮೀಯರೇ,

ನಮ್ಮ ಶಾಲೆಯ ವಿದ್ಯಾರ್ಥಿಗಳ ಏಳಿಗೆಗಾಗಿ ಶಾಲೆಗೆ ಮೂಲಭೂತ ಸೌಕರ್ಯ ಹಾಗೂ ಸೌಲಭ್ಯದೊಂದಿಗೆ ಮಾರ್ಗದರ್ಶನ ನೀಡುತ್ತಿರುವ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು/ಸದಸ್ಯರಿಗೆ ತುಂಬು ಹೃದಯದ ಧನ್ಯವಾದಗಳು. 2022-2023 ನೇ ಸಾಲಿನ ಶಾಲಾ ಪ್ರಾರಂಭೋತ್ಸವಕ್ಕೆ ತಮ್ಮೆಲ್ಲರಿಗೂ ಆದರದ ಸುಸ್ವಾಗತ.

ಕೋವಿಡ್-19ರ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳಲ್ಲಿ ಆಗಿರುವ ಹಲವಾರು ಸಮಸ್ಯೆಗಳಿಗೆ ತಾವು ಸಕಾರಾತ್ಮಕವಾಗಿ ಸ್ಪಂದಿಸಿರುವುದು ಅಭಿನಂದನೀಯ. ಈ ಹಿಂದಿನ ಎರಡು ವರ್ಷಗಳಲ್ಲಿ ಮಕ್ಕಳು ಶಾಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಲು ಸಾಧ್ಯವಾಗಿಲ್ಲ. 2 ವರ್ಷಗಳ ನಂತರ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳು ಪುನರ್ ಪ್ರಾರಂಭಗೊಂಡಿರುವುದರಿಂದ ಕೆಲವು ಮಕ್ಕಳಿಗೆ ಶಾಲೆಗೆ ಹಿಂದಿರುಗುವುದು ಸವಾಲಾಗಿದ್ದರೂ, ಶಾಲಾ ದಿನಚರಿಗೆ ಹಾಗೂ ಪರಿಸರಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಈ ಹೊಸತನದ ಉತ್ಸಾಹವನ್ನು ಹುರಿದುಂಬಿಸಿ, ಅವರಿಗೆ ಉತ್ತಮ ಕಲಿಕಾ ಅನುಭವವನ್ನು ನೀಡುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರವು 2022-2023 ನೇ ಶೈಕ್ಷಣಿಕ ವರ್ಷವನ್ನು **"ಕಲಿಕಾ ಚೇತರಿಕೆ ವರ್ಷ"** ಎಂದು ಘೋಷಿಸಿದ್ದು, ಕಲಿಕಾ ಚೇತರಿಕೆ ಎಂಬ ವಿನೂತನ ಉಪಕ್ರಮವನ್ನು ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 1 ರಿಂದ 9 ನೇ ತರಗತಿಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

ಕಲಿಕಾ ಚೇತರಿಕೆ ಉಪಕ್ರಮದಡಿಯಲ್ಲಿ ಕೆಳಕಂಡಂತೆ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು:

- ಕಲಿಕಾ ಚೇತರಿಕೆ ಅಡಿ ಮಕ್ಕಳ ಕಲಿಕಾ ಅನುಭವಗಳನ್ನು ಫಲಪ್ರದವಾಗಿಸುವ ಪ್ರಯತ್ನವನ್ನು ವರ್ಷವಿಡೀ ನಡೆಸಲು ವೈವಿಧ್ಯಮಯ ಹಾಗೂ ಆಸಕ್ತಿದಾಯಕ ಚಟುವಟಿಕೆಗಳನ್ನು ಹೊಂದಿರುವ ಕಲಿಕಾಹಾಳೆ ಪುಸ್ತಕಗಳನ್ನು ಪ್ರತಿ ಮಗುವಿಗೆ ನೀಡಲಾಗುತ್ತಿದೆ.
- ಕಳೆದ 2 ವರ್ಷಗಳ ಹಾಗೂ ಪ್ರಸ್ತುತ ವರ್ಷದ ಪ್ರಮುಖ ಕಲಿಕಾ ಫಲಗಳನ್ನು ಒಳಗೊಂಡ ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ಮಕ್ಕಳೇ ಸ್ವತಃ, ಅಥವಾ ಸ್ನೇಹಿತರ ಒಟ್ಟಿಗೇ ಹಾಗೂ ಅಗತ್ಯವಿದ್ದಲ್ಲಿ ಶಿಕ್ಷಕರ ಅಥವಾ ಪೋಷಕರ ಸಹಾಯದಿಂದ ಮಾಡುವರು.
- ಮಕ್ಕಳು ತಮ್ಮ ಕಲಿಕಾ ಪ್ರಗತಿಯನ್ನು ತಾವೇ ತಿಳಿದು ವಿವಿಧ ಹಂತಗಳಲ್ಲಿ ದಾಖಲಿಸುತ್ತಾರೆ. ಉನ್ನತ ಹಂತಕ್ಕೆ ತಲುಪಲು ಇರುವ ಸಮಸ್ಯೆಗಳನ್ನು ಶಿಕ್ಷಕರು, ಸ್ನೇಹಿತರು, ಪೋಷಕರು, ಅಕ್ಕಂದಿರು, ಅಣ್ಣಂದಿರೊಂದಿಗೆ ಚರ್ಚಿಸಿ ಪರಿಹರಿಸಿಕೊಳ್ಳುತ್ತಾರೆ.
- ಪ್ರಗತಿ ನೋಟದ ಕೆಳಗೆ ಶಿಕ್ಷಕರು ಹಿಮ್ಮಾಹಿತಿ ನೀಡುತ್ತಾರೆ. ಇದರಿಂದ ತಮ್ಮ ಮಕ್ಕಳ ಕಲಿಕೆಯ ಪ್ರಗತಿಯನ್ನು ಪೋಷಕರು ವೀಕ್ಷಿಸಿ, ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವಂತೆ ಪೋಷಕರನ್ನು ಪ್ರೋತ್ಸಾಹಿಸಲು ತಮ್ಮ ಬೆಂಬಲ ಹಾಗೂ ಪ್ರೇರಣೆ ಅತ್ಯಗತ್ಯವಾಗಿದೆ.
- ಮಕ್ಕಳ ಸಾಧನೆಯನ್ನು ಪೋಷಕರು ಅರ್ಥೈಸಲು ಅನುವಾಗುವಂತೆ perforated (ಪುಸ್ತಕದಿಂದ ಹಾಳೆಯನ್ನು ಸುಲಭವಾಗಿ ತೆಗೆಯಲು) ಕಲಿಕಾ ಹಾಳೆಗಳನ್ನು ಒದಗಿಸಿ, ವೈಯಕ್ತಿಕ ಕೃತಿಸಂಪುಟದಲ್ಲಿ ಸಂಗ್ರಹಿಸಲಾಗುವುದು.
- ಮಕ್ಕಳ ಭಾವನಾತ್ಮಕ ಅಗತ್ಯತೆಗಳನ್ನು ಬೆಂಬಲಿಸಿ, ಸಂತಸದಾಯಕ ಕಲಿಕಾ ಪ್ರಕ್ರಿಯೆಗೆ ಪೂರಕವಾಗಿ ಅವರನ್ನು ತೊಡಗಿಸಿಕೊಳ್ಳಲು ಪೋಷಕರು ಸಹಕರಿಸುವಂತೆ ಎಸ್.ಡಿ.ಎಂ.ಸಿರವರು ಪೋಷಕರನ್ನು ಪ್ರೇರೇಪಿಸಲು ಕೋರಿದೆ.
- ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ನಷ್ಟವನ್ನು ಸರಿದೂಗಿಸುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಕಲಿಕಾ ಚೇತರಿಕೆ ಉಪಕ್ರಮದ ಕುರಿತು ಪೋಷಕರು ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲು ಕಾಲಕಾಲಕ್ಕೆ ಪ್ರಚಾರ ಆಂದೋಲನಗಳನ್ನು ನಡೆಸುವುದು ಹಾಗೂ ಸರ್ಕಾರಿ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಕ್ಕಳ ಅಭಿವೃದ್ಧಿಗೆ ಶ್ರಮಿಸುವುದು.
- ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 ನ್ನು ಅಳವಡಿಸಲು ಅನುಕೂಲವಾಗುವಂತೆ ವಿದ್ಯಾರ್ಥಿಗಳಿಗೆ ಭದ್ರವಾದ ಅಡಿಪಾಯವನ್ನು ಒದಗಿಸಲು ಕಲಿಕಾ ಚೇತರಿಕೆಯ ಅವಶ್ಯಕತೆ ಇರುವುದರಿಂದ ಸರ್ಕಾರಿ ಶಾಲಾ ಮಕ್ಕಳ ಔಪಚಾರಿಕ ಕಲಿಕಾ ಚಟುವಟಿಕೆಗಳನ್ನು ಹುರಿದುಂಬಿಸುವ ಮೂಲಕ 2022-2023 ನೇ ಶೈಕ್ಷಣಿಕ ಸಾಲಿನಲ್ಲಿ ಜಾರಿಗೊಳಿಸಲಾಗಿರುವ ಈ ಉಪಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಕೈಜೋಡಿಸಲು ತಮ್ಮ ಸಹಕಾರ ಕೋರಿದೆ.

(ಪಲ್ಲವಿ ಆಕುರಾತಿ)
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಆತ್ಮೀಯ ಪೋಷಕರೇ,

2022-2023 ನೇ ಸಾಲಿನ ಶಾಲಾ ಪ್ರಾರಂಭೋತ್ಸವಕ್ಕೆ ತಮ್ಮೆಲ್ಲರಿಗೂ ಆದರದ ಸುಸ್ವಾಗತ. ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುತ್ತಿರುವುದಕ್ಕೆ ಧನ್ಯವಾದಗಳು. ಮಕ್ಕಳನ್ನು ಶಾಲೆಗೆ ಸ್ವಾಗತಿಸಲು ಹರ್ಷಿಸುತ್ತೇವೆ.

ಕೋವಿಡ್-19ರ ಸಾಂಕ್ರಾಮಿಕದ ಪರಿಣಾಮವಾಗಿ ಈ ಹಿಂದಿನ ಎರಡು ವರ್ಷಗಳಲ್ಲಿ ಮಕ್ಕಳು ಶಾಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಲು ಸಾಧ್ಯವಾಗಿಲ್ಲ. 2 ವರ್ಷಗಳ ನಂತರ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳು ಪುನರ್ ಪ್ರಾರಂಭಗೊಂಡಿರುವುದರಿಂದ ಕೆಲವು ಮಕ್ಕಳಿಗೆ ಶಾಲೆಗೆ ಹಿಂದಿರುಗುವುದು ಸವಾಲಾಗಿದ್ದರೂ, ಶಾಲಾ ದಿನಚರಿಗೆ ಹಾಗೂ ಪರಿಸರಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಈ ಹೊಸತನದ ಉತ್ಸಾಹವನ್ನು ಹುರಿದುಂಬಿಸಿ, ಅವರಿಗೆ ಉತ್ತಮ ಕಲಿಕಾ ಅನುಭವವನ್ನು ನೀಡುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರವು 2022-2023 ನೇ ಶೈಕ್ಷಣಿಕ ವರ್ಷವನ್ನು **"ಕಲಿಕಾ ಚೇತರಿಕೆ ವರ್ಷ"** ಎಂದು ಘೋಷಿಸಿದ್ದು, ಕಲಿಕಾ ಚೇತರಿಕೆ ಎಂಬ ವಿನೂತನ ಉಪಕ್ರಮವನ್ನು ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 1 ರಿಂದ 9 ನೇ ತರಗತಿಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

ಕಲಿಕಾ ಚೇತರಿಕೆ ಉಪಕ್ರಮದಡಿಯಲ್ಲಿ ಕೆಳಕಂಡಂತೆ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು:

- ಕಲಿಕಾ ಚೇತರಿಕೆ ಅಡಿ ಮಕ್ಕಳ ಕಲಿಕಾ ಅನುಭವಗಳನ್ನು ಫಲಪ್ರದವಾಗಿಸುವ ಪ್ರಯತ್ನವನ್ನು ವರ್ಷವಿಡೀ ನಡೆಸಲು ಚೇತರಿಕಾ ಚಟುವಟಿಕೆಯನ್ನು ರೂಪಿಸಿದೆ.
- ವೈವಿಧ್ಯಮಯ ಹಾಗೂ ಆಸಕ್ತಿದಾಯಕ ಚಟುವಟಿಕೆಗಳನ್ನು ಹೊಂದಿರುವ ಕಲಿಕಾಹಾಳೆ ಪುಸ್ತಕಗಳನ್ನು ಪ್ರತಿ ಮಗುವಿಗೆ ನೀಡಲಾಗುತ್ತಿದೆ. ಮಕ್ಕಳೇ ಸ್ವತಃ, ಅಥವಾ ಸ್ನೇಹಿತರ ಒಟ್ಟಿಗೇ ಹಾಗೂ ಅಗತ್ಯವಿದ್ದಲ್ಲಿ ಶಿಕ್ಷಕರ ಅಥವಾ ಪೋಷಕರ ಸಹಾಯದಿಂದ ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ಮಾಡುವರು.
- ಮಕ್ಕಳು ಕಲಿಕಾ ಪ್ರಗತಿಯನ್ನು ಸ್ವತಃ ತಿಳಿದು ವಿವಿಧ ಹಂತಗಳಲ್ಲಿ ದಾಖಲಿಸುತ್ತಾರೆ. ಉನ್ನತ ಹಂತಕ್ಕೆ ತಲುಪಲು ಇರುವ ಸಮಸ್ಯೆಗಳನ್ನು ಶಿಕ್ಷಕರು, ಸ್ನೇಹಿತರು, ಪೋಷಕರು ಅಕ್ಕಂದಿರು, ಅಣ್ಣಂದಿರೊಂದಿಗೆ ಚರ್ಚಿಸಿ ಪರಿಹರಿಸಿಕೊಳ್ಳುತ್ತಾರೆ. ಪ್ರಗತಿ ನೋಟದ ಕೆಳಗೆ ಶಿಕ್ಷಕರು ಹಿಮ್ಮಾಹಿತಿ ನೀಡುತ್ತಾರೆ. ಇದರಿಂದ ಮಕ್ಕಳ ಕಲಿಕೆಯ ಪ್ರಗತಿಯನ್ನು ವೀಕ್ಷಿಸಿ, ಪ್ರೋತ್ಸಾಹಿಸಲು ಹಾಗೂ ಬೆಂಬಲ ನೀಡಲು ಕೋರಿದೆ.
- ಮಗುವಿನ ಸಾಧನೆಯನ್ನು ವೈಯಕ್ತಿಕ ಕೃತಿಸಂಪುಟದಲ್ಲಿ ಸಂಗ್ರಹಿಸಲು ಅನುವಾಗುವಂತೆ perforated (ಪುಸ್ತಕದಿಂದ ಹಾಳೆಯನ್ನು ಸುಲಭವಾಗಿ ತೆಗೆಯಲು) ಕಲಿಕಾ ಹಾಳೆಗಳನ್ನು ಒದಗಿಸಲಾಗುವುದು.
- ಶಿಕ್ಷಕರ ಕೈಪಿಡಿ ಹಾಗೂ ಕಲಿಕಾ ಹಾಳೆಗಳನ್ನು ತರಗತಿಗಳಲ್ಲಿ ನಿರ್ವಹಿಸುವ ಕುರಿತು ಶಿಕ್ಷಕರಿಗೆ ಈಗಾಗಲೇ ತರಬೇತಿಯನ್ನು ನೀಡಿದ್ದು, ಅವುಗಳನ್ನು ಪಠ್ಯಪುಸ್ತಕಗಳೊಂದಿಗೆ ಬಳಸಿ ಮಕ್ಕಳ ಕಲಿಕೆಯನ್ನು ಅನುಕೂಲಿಸುವರು.
- ಮಕ್ಕಳ ಭಾವನಾತ್ಮಕ ಅಗತ್ಯತೆಗಳನ್ನು ಬೆಂಬಲಿಸಿ, ಸಂತಸದಾಯಕ ಕಲಿಕಾ ಪ್ರಕ್ರಿಯೆಗೆ ಪೂರಕವಾಗಿ ಅವರನ್ನು ತೊಡಗಿಸಿಕೊಳ್ಳಲು ತಮ್ಮ ಸಹಕಾರ ಅತ್ಯಗತ್ಯವಾಗಿದೆ.
- ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ನಷ್ಟವನ್ನು ಸರಿದೂಗಿಸುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಮಕ್ಕಳ ಔಪಚಾರಿಕ ಕಲಿಕಾ ಚಟುವಟಿಕೆಗಳನ್ನು ಹುರಿದುಂಬಿಸುವ ಮೂಲಕ 2022-2023 ನೇ ಶೈಕ್ಷಣಿಕ ಸಾಲಿನಲ್ಲಿ ಜಾರಿಗೊಳಿಸಲಾಗಿರುವ ಈ ಉಪಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಕೈಜೋಡಿಸಲು ತಮ್ಮ ಸಹಕಾರ ಕೋರಿದೆ.




(ಪಲ್ಲವಿ ಆಕುರಾತಿ)
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಆತ್ಮೀಯ ಶಿಕ್ಷಕ ಬಂಧುಗಳೇ,

2022–2023 ನೇ ಶೈಕ್ಷಣಿಕ ಸಾಲಿಗೆ ತಮ್ಮೆಲ್ಲರಿಗೂ ಹೃತ್ಪೂರ್ವಕ ಸುಸ್ವಾಗತ.

ಕೋವಿಡ್–19ರ ಸಾಂಕ್ರಾಮಿಕದ ಪರಿಣಾಮವಾಗಿ ಈ ಹಿಂದಿನ ಎರಡು ವರ್ಷಗಳಲ್ಲಿ ಮಕ್ಕಳು ಶಾಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಲು ಸಾಧ್ಯವಾಗಿಲ್ಲ. 2 ವರ್ಷಗಳ ನಂತರ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳು ತಡವಾಗಿ ಪ್ರಾರಂಭಗೊಂಡಿರುವುದರಿಂದ ಕೆಲವು ಮಕ್ಕಳಿಗೆ ಶಾಲೆಗೆ ಹಿಂದಿರುಗುವುದು ಸವಾಲಾಗಿದ್ದರೂ, ಶಾಲಾ ದಿನಚರಿಗೆ ಹಾಗೂ ಪರಿಸರಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಈ ಹೊಸತನದ ಉತ್ಸಾಹವನ್ನು ಹುರಿದುಂಬಿಸಿ, ಅವರಿಗೆ ಉತ್ತಮ ಕಲಿಕಾ ಅನುಭವವನ್ನು ನೀಡುವ ಅವಶ್ಯಕತೆ ಇದೆ.

ಹಿಂದಿನ ತರಗತಿಯಲ್ಲಿ ಪಡೆಯಬೇಕಾಗಿದ್ದ ಕೌಶಲ ಮತ್ತು ಜ್ಞಾನವನ್ನು ಗಳಿಸಲು ಅನುಕೂಲವಾಗುವಂತೆ, ಹಿಂದಿನ ತರಗತಿಗಳ ಪ್ರಮುಖ ಕಲಿಕಾ ಸಾಮರ್ಥ್ಯಗಳನ್ನೂ ಒಳಗೊಂಡಂತೆ ಪ್ರಸ್ತುತ ಓದುತ್ತಿರುವ ತರಗತಿಯ ಪ್ರಮುಖ ಕಲಿಕಾ ಸಾಮರ್ಥ್ಯಗಳು (core competency) ಹಾಗೂ ಬುನಾದಿ ಅಕ್ಷರಜ್ಞಾನ ಮತ್ತು ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಕಲಿಕಾಫಲಗಳನ್ನು ಅಂತರ್ಗತ ಗೊಳಿಸಿ 2022–2023 ನೇ ಸಾಲಿಗೆ ವಿಷಯವಾರು, ತರಗತಿವಾರು ಪರಿಷ್ಕೃತ ಕಲಿಕಾಫಲಗಳನ್ನು ಒಳಗೊಂಡ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಿ ಕಲಿಕಾ ಚೇತರಿಕೆ ಉಪಕ್ರಮವನ್ನು ಸಾಧಿಸಬೇಕಿದೆ. ಈ ನಿಟ್ಟಿನಲ್ಲಿ 2022 –2023 ಶೈಕ್ಷಣಿಕ ವರ್ಷವನ್ನು **"ಕಲಿಕಾ ಚೇತರಿಕೆ" ವರ್ಷ** ಎಂದು ಘೋಷಿಸಲಾಗಿದೆ.

ಆದ್ದರಿಂದ ವಿದ್ಯಾರ್ಥಿಯ ವೈಯಕ್ತಿಕ ಕೃತಿಸಂಪುಟವನ್ನು (students individual portfolio) ನಿರ್ವಹಿಸಲು ಅನುವಾಗುವಂತೆ perforated ಕಲಿಕಾ ಹಾಳೆಗಳನ್ನು ಹಾಗೂ ಅವುಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಮಾರ್ಗಸೂಚಿಗಳನ್ನು ಒಳಗೊಂಡ ಶಿಕ್ಷಕರ ಕೈಪಿಡಿಯನ್ನು ಸಿದ್ಧಪಡಿಸಲಾಗಿದ್ದು, ತಮಗೆಲ್ಲರಿಗೂ ತರಬೇತಿಯನ್ನು ನೀಡಲಾಗಿರುತ್ತದೆ.

ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ನಷ್ಟವನ್ನು ಸರಿದೂಗಿಸಿ ರಾಷ್ಟ್ರೀಯ ಶಿಕ್ಷಣ ನೀತಿ 2020ರ ವಿಷಯಗಳನ್ನು ಸಾಕಾರಗೊಳಿಸುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ.ಹಾಗಾಗಿ 2 ವರ್ಷಗಳಲ್ಲಿ ವಿದ್ಯಾರ್ಥಿಗಳ ಭೌತಿಕ ತರಗತಿಗಳಿಗೆ ಉಂಟಾಗಿರುವ ಕಲಿಕಾ ಅಂತರವನ್ನು ನಿವಾರಿಸೋಣ. ತಮಗೆ ನೀಡಲಾದ ತರಬೇತಿಗೆ ಸಂಬಂಧಿಸಿದಂತೆ ಈ ವಿನೂತನ ಉಪಕ್ರಮವನ್ನು ಸಹೃದಯೀ ಶಿಕ್ಷಕರು ಹೃದಯ ಪೂರ್ವಕವಾಗಿ ಸ್ವಾಗತಿಸಿರುತ್ತೀರಿ. ಕಲಿಕಾ ಹಾಳೆಗಳು ಹಾಗೂ ಶಿಕ್ಷಕರ ಕೈಪಿಡಿಯ ಬಗ್ಗೆಯೂ ಸಕಾರಾತ್ಮಕವಾಗಿ ಸ್ಪಂದಿಸಿರುವಿರಿ.

ಕಲಿಕಾ ಚೇತರಿಕೆ ಉಪಕ್ರಮದ ಯಶಸ್ವಿಯು ಶಿಕ್ಷಕರಾದ ತಮ್ಮೆಲ್ಲರ ಸಹಕಾರದಿಂದ ಮತ್ತು ಸಕ್ರಿಯ ಭಾಗವಹಿಸುವಿಕೆಯಿಂದ ಮಾತ್ರ ಸಾಧ್ಯ. ಇಲಾಖೆಯ ಈ ಮಹತ್ವಾಕಾಂಕ್ಷಿ ಉದ್ದೇಶ ಸಾಧನೆಗೆ ತಾವೆಲ್ಲರೂ ಕೈ ಜೋಡಿಸುವಿರೆಂದು ಆಶಿಸಲಾಗಿದೆ ಹಾಗೂ ಶುಭ ಕೋರಿದೆ.

(ಪಲ್ಲವಿ ಅಕುರಾತಿ)
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

DSERT
5/4/22